ರಿಜಿಡ್ ಪಿ.ವಿ.ಸಿ.
ಶ್ರೀಕೃಷ್ಣ ಪೈಪ್

ಉದಯವಾಣಿ
ಜನಮನದ ಜೀವನಾಡಿ
ಮಣಿಪಾಲ । ಬೆಂಗಳೂರು । ಹುಬ್ಬಳ್ಳಿ । ಕಲಬುರಗಿ । ದಾವಣಗೆರೆ । ಮುಂಬಯಿ

CENTRAL LIBRARY

ಸಂಧಿ
SDM
ISO / GMP CERTIFIED

Regd.No.UDP/1259/2018-20 | udayavani.com | UDAYAVANI – KANNADA DAILY – MANIPAL ಮಣಿಪಾಲ, ಗುರುವಾರ, ಏಪ್ರಿಲ್ 26, 2018 ಬೆಲೆ: ₹ 5-00 ವಿದೇಶ ಬೆಲೆ: ₹ 6-00 ಪುಟಗಳು 14+4 (UDP 6. KUN

# ಮ್ಯಾನೇಜ್‌ಮೆಂಟ್ ಕಾಲೇಜುಗಳಿಗೂ ಬೀಗ?

**ದೇಶದಲ್ಲಿ ಕೆಲವೊಂದು ಎಂಜಿನಿಯರಿಂಗ್ ಕಾಲೇಜುಗಳು ಮುಚ್ಚುಗಡೆಯಾಗುತ್ತವೆ ಎಂಬ ವರದಿಗಳ ನಡುವೆಯೇ ಉದ್ಯಮಾಡಳಿತ (ಬ್ಯುಸಿನೆಸ್ ಮ್ಯಾನೇಜ್‌ಮೆಂಟ್) ಕಾಲೇಜುಗಳೂ ಮುಚ್ಚಲಿವೆ. ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (ಎಐಸಿಟಿಇ) ನೀಡಿದ ಮಾಹಿತಿಯಂತೆ ಪ್ರಸಕ್ತ ವರ್ಷವೇ 101 ಉದ್ಯಮಾಡಳಿತ ಕಾಲೇಜುಗಳು ಮುಚ್ಚಲು ಸ್ವಯಂ ಪ್ರೇರಿತವಾಗಿಯೇ ಮನವಿ ಸಲ್ಲಿಸಿವೆ. ಉದ್ಯೋಗಾವಕಾಶಗಳು ಕಡಿಮೆಯಾಗಿರುವ ಹಿನ್ನೆಲೆಯಲ್ಲಿ ಮಂಡಳಿ ಈ ಅರ್ಜಿಗಳನ್ನು ಮಾನ್ಯ ಮಾಡುವುದು ಬಹುತೇಕ ಖಚಿತ.**

## 10,000
ಏಕಕಾಲಕ್ಕೆ 101 ಶಿಕ್ಷಣ ಸಂಸ್ಥೆಗಳು ಮುಚ್ಚಿದರೆ ಕಣ್ಮರೆಯಾಗುವ ಬ್ಯುಸಿನೆಸ್ ಮ್ಯಾನೇಜ್‌ಮೆಂಟ್ ಸೀಟುಗಳು

## 3,264
ಒಟ್ಟು ಇರುವ ಮ್ಯಾನೇಜ್‌ಮೆಂಟ್ ಮತ್ತು ಉದ್ಯಮಾಡಳಿತ ಕಾಲೇಜುಗಳು

ಸುದ್ದಿ ಕೋಶ 360°



“ಕೇಂದ್ರ ಸರ್ಕಾರ ಕಾಲೇಜುಗಳ ಮುಚ್ಚುವುದನ್ನು ಸಮಸ್ಯೆ ಎಂದು ಪರಿಗಣಿಸುತ್ತಿಲ್ಲ. ಉತ್ತಮ ಗುಣಮಟ್ಟದ ಶಿಕ್ಷಣವೇ ನಮ್ಮ ಆದ್ಯತೆಯಾಗಿದೆ. ಗುಣಮಟ್ಟದ ಶಿಕ್ಷಣ ನೀಡಲು ಅಸಾಧ್ಯವಾದ ಸಂಸ್ಥೆಗಳು ಮುಚ್ಚುವುದು ಒಳ್ಳೆಯದೇ.

• ಆರ್.ಸುಬ್ರಹ್ಮಣ್ಯಂ,
ಉನ್ನತ ಶಿಕ್ಷಣ ಕಾರ್ಯದರ್ಶಿ

| ರಾಜ್ಯ | ಬ್ಯುಸಿನೆಸ್ ಕಾಲೇಜುಗಳು |
|---|---|
| ಉತ್ತರ ಪ್ರದೇಶ | 37 |
| ಮಹಾರಾಷ್ಟ್ರ | 10 |
| ಕರ್ನಾಟಕ | 10 |
| ಹರ್ಯಾಣ | 07 |

## ಉದ್ಯೋಗಾವಕಾಶಗಳು ಹೇಗಿದ್ದವು?

**5%** 2017ರಲ್ಲಿ ಹೊಸ ಪದವೀಧರರಿಗೆ ತಗ್ಗಿದ್ದ ಉದ್ಯೋಗಾವಕಾಶಗಳ ಪ್ರಮಾಣ

**1.5 ಲಕ್ಷ** ಇಷ್ಟು ಮಂದಿ ಎಂಬಿಎ ಪದವೀಧರರಿಗೆ 2016-17ರಲ್ಲಿ ಸಿಕ್ಕಿದ್ದ ಕ್ಯಾಂಪಸ್ ಅವಕಾಶ

**12%** ಪಿ.ಜಿ.ಡಿಪ್ಲೊಮಾ ಇನ್ ಬ್ಯುಸಿನೆಸ್ ಮ್ಯಾನೇಜ್‌ಮೆಂಟ್ ಪದವೀಧರರಿಗೆ ಸಿಕ್ಕಿದ್ದ ಅವಕಾಶ

## ಕಾರಣಗಳೇನು?

- ಕೆಲವೊಂದು ಕೋರ್ಸ್‌ಗಳಿಗೆ ಬೇಡಿಕೆ ಕಡಿಮೆಯಾಗಿರುವುದು. ಉದಾಹರಣೆಗೆ ಮಾರ್ಕೆಟಿಂಗ್.
- ಡೀಮ್ಡ್ ಮತ್ತು ವಿವಿಧ ರಾಜ್ಯಗಳಲ್ಲಿ ಖಾಸಗಿ ವಿವಿಗಳು ರಚನೆಯಾಗಿರುವುದು.
- ಎಐಸಿಟಿಇ, ರಾಜ್ಯ ಸರ್ಕಾರಗಳ ನೀತಿಗಳನ್ನು ಶಿಕ್ಷಣ ಸಂಸ್ಥೆಗಳಿಗೆ ಪಾಲಿಸಲು ಅಸಾಧ್ಯವಾಗಿರುವುದು.
- ನಿಗದಿಪಡಿಸಲಾಗಿರುವ ಶಿಕ್ಷಣ ಶುಲ್ಕಗಳಿಂದ ಸಂಸ್ಥೆಗಳಿಗೆ ಆದಾಯ ಬರದೇ ಇರುವುದು.
- ಆರಂಭಿಕ ಹಂತದ ಉದ್ಯೋಗಗಳನ್ನು ಕೃತಕ ಬುದ್ಧಿಮತ್ತೆ (ಎ.ಐ), ಸ್ವಯಂಚಾಲಿತ (ಅಟೊಮೇಷನ್) ವ್ಯವಸ್ಥೆಗೆ ಕಂಪನಿಗಳು ಒಳಪಡಿಸಿದ್ದು
- ಶಿಕ್ಷಣ ಸಂಸ್ಥೆಗಳಲ್ಲಿ ಉತ್ತಮ ಗುಣಮಟ್ಟದ ಪ್ರಾಧ್ಯಾಪಕರು ಇಲ್ಲದೇ ಇರುವುದು.
- ಪದವೀಧರರಿಗೆ ಕೈಗಾರಿಕಾ ಸಂಸ್ಥೆಗಳ ಜತೆ ನಿಕಟ ಸಂಪರ್ಕ, ಪ್ರಾಯೋಗಿಕ ತರಬೇತಿ ಕೊರತೆ

## ಮುಚ್ಚಿದ ಕಾಲೇಜುಗಳು

| | |
|---|---|
| 2015-16 | 66 |
| 2016-17 | 76 |

## ಮನವಿ ಮಾಡಿದ ಕಾಲೇಜುಗಳು

| | |
|---|---|
| 2017-18 | 101 |

ಗುರುವಾರ,26 ಏಪ್ರಿಲ್ 2018 | ಪುಟಗಳು: 12+4+2 | ಬೆಲೆ: ₹ 5.00

www.vijaykarnataka.com

ಸಂಪುಟ: 17 | ಸಂಚಿಕೆ: 270

VK

# ವಿಜಯ ಕರ್ನಾಟಕ

ಮಂಗಳೂರು | ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟ | ಕಲಬುರಗಿ






ಸತತ ಸೋಲಿನ ಒತ್ತಡ: ಡೆಲ್ಲಿ ತಂಡದ ನಾಯಕತ್ವ



58 ಸಂಸದರು, ಶಾಸಕರ ವಿರುದ್ಧ ದ್ವೇಷಪೂರಿತ ಭಾಷಣ ಪ್ರಕರಣ: ಅರ್ಧದಷ್ಟು

ಮಕ್ಕಳ ಅತ್ಯಾಚಾರ ಹೆಣ್ಮಕ್ಕಳಿಗೆ ಸೀಮಿತವಲ್ಲ,

## ಪ್ರವೇಶ ಶುಲ್ಕ ಶೇ.50ರಷ್ಟು ಹೆಚ್ಚಳಕ್ಕೆ ಖಾಸಗಿ ಕಾಲೇಜುಗಳ ಡಿಮ್ಯಾಂಡ್

# ಬಿಇ: ಶುಲ್ಕ ಏರಿಕೆಗೆ ಒತ್ತಡ

**ಶಿವರಾಮ್** ಬೆಂಗಳೂರು

ಎಂಜಿನಿಯರಿಂಗ್ ಕೋರ್ಸ್‌ಗಳ ಪ್ರವೇಶ ಶುಲ್ಕವನ್ನು ಈ ಬಾರಿ ಶೇ.50ರಷ್ಟು ಏರಿಸಲು ಅವಕಾಶ ನೀಡಬೇಕೆಂಬ ಬೇಡಿಕೆಯನ್ನು ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳು ಹೊಸ ಸರಕಾರದ ಮುಂದಿಡಲು ನಿರ್ಧರಿಸಿವೆ. ಬರ ಇದ್ದ ಕಾರಣ ಶುಲ್ಕ ಹೆಚ್ಚಳ ಬೇಡ ಎಂದು ಕಳೆದ ಬಾರಿ ಸರಕಾರ ಮನವರಿಕೆ ಮಾಡಿತ್ತು.

''ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿದರೂ ಪ್ರಯೋಜನವಾಗದು. ಹಾಗಾಗಿ ಹೊಸ ಸರಕಾರ ಅಸ್ತಿತ್ವಕ್ಕೆ ಬಂದ ನಂತರ ಶೇ.45ರಿಂದ 50ರಷ್ಟು ಶುಲ್ಕ ಹೆಚ್ಚಿಸುವಂತೆ ಒತ್ತಡ ಹೇರಲಾಗುವುದು,'' ಎಂದು ಖಾಸಗಿ ಅನುದಾನರಹಿತ ಎಂಜಿನಿಯರಿಂಗ್ ಕಾಲೇಜುಗಳ ಸಂಘದ ಕಾರ್ಯದರ್ಶಿ ಎಂ.ಕೆ.ಪಾಂಡುರಂಗಶೆಟ್ಟಿ 'ವಿಕ'ಕ್ಕೆ ತಿಳಿಸಿದರು.

»05



### ವೈದ್ಯ, ದಂತ ವೈದ್ಯ ಕೋರ್ಸ್ ಶುಲ್ಕವೂ ಶೇ.10 ಹೆಚ್ಚಳ

ವೈದ್ಯ ಹಾಗೂ ದಂತ ವೈದ್ಯ ಕೋರ್ಸ್‌ಗಳ ಶುಲ್ಕದಲ್ಲಿಯೂ ಈ ವರ್ಷ ಶೇ.10ರಷ್ಟು ಹೆಚ್ಚಳವಾಗುವ ಸಂಭವವಿದೆ. 2017-18ರಲ್ಲಿ ಖಾಸಗಿ ವೈದ್ಯಕೀಯ ಕಾಲೇಜುಗಳ ಜತೆ ಸರಕಾರ ಮಾಡಿಕೊಂಡ ಒಪ್ಪಂದದನ್ವಯ ಮೂರು ವರ್ಷಗಳ ಅವಧಿಗೆ ಪ್ರತಿ ವರ್ಷ ಶೇ.10 ಶುಲ್ಕ ಏರಿಕೆಗೆ ಒಪ್ಪಿಗೆ ಸೂಚಿಸಲಾಗಿತ್ತು. ಹೀಗಾಗಿ 2018-19 ಹಾಗೂ 2019-20ರಲ್ಲಿಯೂ ಶೇ.10ರಷ್ಟು ಶುಲ್ಕ ಹೆಚ್ಚಳವಾಗುವ ಸಾಧ್ಯತೆ ಇದೆ.

# ಬಿಇ: ಶುಲ್ಕ ಏರಿಕೆಗೆ ಒತ್ತಡ

» ಮೊದಲ ಪುಟದಿಂದ

''ಕಳೆದ ವರ್ಷ ಸರಕಾರ ಮನವೊಲಿಕೆ ಮಾಡಿದ್ದರಿಂದ ಶುಲ್ಕ ಏರಿಸಿರಲಿಲ್ಲ. ಆದರೆ, ಈ ವರ್ಷ ವೇತನ ಹೆಚ್ಚಳ ಮಾಡಿರುವುದರಿಂದ ಸಿಬ್ಬಂದಿಗೆ ಇಎಸ್‌ಐ, ಪಿಎಫ್ ಇತ್ಯಾದಿ ಸೌಲಭ್ಯಗಳನ್ನು ನೀಡಬೇಕಾಗುವುದರಿಂದ ನಮಗೆ ಶೇ.40ರಷ್ಟು ಹೊರೆ ಬಿದ್ದಿದೆ,'' ಎಂದು ಅವರು ಹೇಳಿದರು.

''ಎಂಜಿನಿಯರಿಂಗ್ ಕೋರ್ಸ್‌ಗಳಿಗೆ ಬೇಡಿಕೆ ಕಡಿಮೆಯಾಗುತ್ತಿದೆ. ಬಹಳಷ್ಟು ಕಾಲೇಜುಗಳನ್ನು ಮುಚ್ಚುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಆದರೆ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕಾಲೇಜುಗಳನ್ನು ನಡೆಸುವಂತೆ ಮನವಿ ಮಾಡಿಕೊಂಡಿದ್ದೇವೆ ಎಂದು ಎಐಸಿಟಿಇ ಮುಖ್ಯಸ್ಥರೇ ಹೇಳಿದ್ದಾರೆ. ಇಂತಹ ಸನ್ನಿವೇಶದಲ್ಲಿ ರಾಜ್ಯ ಸರಕಾರ ಶುಲ್ಕ ಏರಿಕೆಗೆ ಅವಕಾಶ ಮಾಡಿಕೊಡಲೇಬೇಕು,'' ಎಂದು ಅವರು ಒತ್ತಾಯಿಸಿದರು.

**ಖಾಸಗಿ ವಿವಿ ಮಾನ್ಯತೆಗೆ ಪ್ರಯತ್ನ:** ''ರಾಜ್ಯ ಸರಕಾರ ಎಂಜಿನಿಯರಿಂಗ್ ಶುಲ್ಕ ಹೆಚ್ಚಿಸಲು ಅವಕಾಶ ಮಾಡಿಕೊಡದಿದ್ದಲ್ಲಿ ಕಾಲೇಜುಗಳನ್ನು ಮುಚ್ಚುವುದು ಅಥವಾ ಖಾಸಗಿ ವಿವಿಗಳ ಮಾನ್ಯತೆ ಪಡೆಯುವುದು ಅನಿವಾರ್ಯವಾಗುತ್ತದೆ. ಸರಕಾರ ನಿಗದಿಪಡಿಸುವ ಶುಲ್ಕದಿಂದ ಕಾಲೇಜುಗಳನ್ನು ನಡೆಸಲು ಸಾಧ್ಯವೇ ಇಲ್ಲ. ಈ ಕಾರಣದಿಂದಲೇ ಬಹಳಷ್ಟು ಕಾಲೇಜುಗಳು ಖಾಸಗಿ ವಿವಿಗಳ ಮಾನ್ಯತೆ ಪಡೆದು ತಾವೇ ಶುಲ್ಕ ನಿಗದಿಪಡಿಸಿಕೊಳ್ಳುವ ಮೂಲಕ ಕೆಲವೇ ಸೀಟುಗಳನ್ನು ಸರಕಾರಕ್ಕೆ ಬಿಟ್ಟು ಕೊಡುತ್ತಿವೆ,'' ಎಂದು ಖಾಸಗಿ ಎಂಜಿನಿಯರಿಂಗ್ ಕಾಲೇಜಿನ ಮುಖ್ಯಸ್ಥರೊಬ್ಬರು ಪ್ರತಿಕ್ರಿಯಿಸಿದರು.

### ಸಂಭವನೀಯ ಶುಲ್ಕ

- ಖಾಸಗಿ ಕಾಲೇಜುಗಳಲ್ಲಿ ಸರಕಾರಿ ಕೋಟಾದ ವೈದ್ಯ ಕೋರ್ಸ್: ಹಾಲಿ ಶುಲ್ಕ 70,000, ಪರಿಷ್ಕೃತ 77,000 ರೂ.
- ಕಾಮೆಡ್-ಕೆ ಕೋಟಾ: ಹಾಲಿ 5.75 ಲಕ್ಷ ರೂ., ಪರಿಷ್ಕೃತ 6.32 ಲಕ್ಷ
- ಖಾಸಗಿ ಕಾಲೇಜುಗಳಲ್ಲಿ ಸರಕಾರಿ ಕೋಟಾದ ದಂತ ಕೋರ್ಸ್: ಹಾಲಿ 45,000 ರೂ, ಪರಿಷ್ಕೃತ 49,000 ರೂ.
- ಕಾಮೆಡ್-ಕೆ ಕೋಟಾದಡಿ ಶುಲ್ಕ: ಹಾಲಿ 3.90 ಲಕ್ಷ ರೂ. ಪರಿಷ್ಕೃತ 4.29 ಲಕ್ಷ ರೂ.
- ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಹಾಲಿ ಸರಕಾರಿ ಕೋಟಾ: 49,500-55,000 ರೂ.
- ಕಾಮೆಡ್-ಕೆ ಕೋಟಾ ಹಾಲಿ ಶುಲ್ಕ: 1.21 ರಿಂದ 1.70 ಲಕ್ಷ